ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳು

672(1325) ಶ್ರೀ ಬಂಡೆಪ್ಪ ಕಾಶೆಂಪೂರ್:(ಬೀದರ್ ದಕ್ಷಿಣ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತಹಶೀಲ್ದಾರ್ ರವರು ನೀಡುವ ಜಾತಿ ಪತ್ರ ಮತ್ತು ಆದಾಯ ಪ್ರಮಾಣ ಪತ್ರಕ್ಕೆ ಒದಗಿಸಬೇಕಾದ ದಾಖಲಾತಿ ಪತ್ರಗಳು ಯಾವುವು; (ವಿವರ ನೀಡುವುದು);

ಆ) ವಿದ್ಯಾಭ್ಯಾಸಕ್ಕೆ ಮತ್ತು ಉದ್ಯೋಗಕ್ಕೆ ಹಾಗೂ ಇತರೆ ಉದ್ದೇಶಗಳಿಗೆ ಪ್ರತ್ಯೇಕ ಜಾತಿ ಪ್ರಮಾಣ ಪತ್ರ ಮತ್ತು ಆದಾಯ ಪ್ರಮಾಣ ಪತ್ರ ನೀಡಲು ಬೇರೆ ನಿಯಮಾವಳಿಗಳೇನಾದರೂ ಇದೆಯೇ; ಹಾಗಿದ್ದಲ್ಲಿ, ನಿಯಮಾವಳಿಯ ಪ್ರತಿಯನ್ನು ಒದಗಿಸುವುದು;

ಇ) ಒಂದು ಬಾರಿ ನೀಡಿದ ಜಾತಿ ಪ್ರಮಾಣ ಪತ್ರವು ಎಷ್ಟು ವರ್ಷದವರೆಗೆ ಚಾಲ್ತಿಯಲ್ಲಿರುತ್ತದೆ.

ಈ) ಜಾತಿ ಪ್ರಮಾಣ ಪತ್ರ ಪಡೆಯುವಲ್ಲಿ ಆಗುತ್ತಿರುವ ವಿಳಂಬವು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಬಂದಿದ್ದಲ್ಲಿ, ಈ ವಿಳಂಬವನ್ನು ತಪ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಊ) ಸಾರ್ವಜನಿಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಅನುಕೂಲವಾಗಲು ಜಾತಿ ಪ್ರಮಾಣ ಪತ್ರ ವಿತರಿಸಲು ಸರಳ ನಿಯಮಾವಳಿಗಳನ್ನು ರೂಪಿಸಲು ಸರ್ಕಾರ ಆಲೋಚಿಸಿದೆಯೇ; (ಮಾಹಿತಿ ನೀಡುವುದು)?

ಶ್ರೀ ಜಿ ಕರುಣಾಕರ ರೆಡ್ಡಿ(ಕಂದಾಯ ಸಚಿವರು)

ಅ) ಸರ್ಕಾರದ ಅಧಿಸೂಚನೆ ಸಂಖ್ಯೆ ಎಸ್‌ಡಬ್ಲ್ಯೂಡಿ 132 ಎಸ್‌ಎಡಿ 97 ದಿನಾಂಕ: 08–02–2000. ರಲ್ಲಿ ತಿಳಿಸಿರುವಂತೆ ಕರ್ನಾಟಕ ಅನುಸೂಚಿತ ಜಾತಿಗಳು ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿಗಳು ಮುಂತಾದವುಗಳ ಮೀಸಲಾತಿ) (ತಿದ್ದುಪಡಿ) ನಿಯಮಗಳು,

2000 ರಲ್ಲಿ ತಿಳಿಸಿರುವಂತೆ ನಿಯಮ 3ಎ ಅನ್ವಯ ಜಾತಿ ಪ್ರಮಾಣ ಪತ್ರ ಅಥವಾ ಆದಾಯ ಮತ್ತು ಜಾತಿ ಪ್ರಮಾಣ ಪತ್ರಗಳಿಗಾಗಿ ಪ್ರತಿಯೊಂದು ಅರ್ಜಿಯು ಕ್ಲೇಮಿನ ಸಮರ್ಥನೆಗಾಗಿ ಅಂಥ ದಸ್ತಾವೇಜುಗಳು ಮತ್ತು ಅವಶ್ಯಕವಾದ ಇತರೆ ವಿಷಗಳೊಡನೆ ಸೂಕ್ತದಂತೆ 'ಎ' 'ಬಿ' ಅಥವಾ 'ಸಿ' ನಮೂನೆಗಳಲ್ಲಿ ಇರತಕ್ಕದ್ದು. (ನಮೂನೆ ಪ್ರತಿಗಳನ್ನು ಲಗತ್ತಿಸಿದೆ).

ಆ) ಪ್ರತ್ಯೇಕ ನಿಯಮಾವಳಿ ಇರುವುದಿಲ್ಲ.

ಇ) ಸರ್ಕಾರದ ಸುತ್ತೋಲೆ ಸಂಖ್ಯೆ:ಸಕಇ 120 ಬಿಸಿಎ 2008, ದಿನಾಂಕ:24.9.2008ರನ್ವಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು ಮತ್ತು ಹಿಂದುಳಿದ ವರ್ಗಗಳ ಪ್ರವರ್ಗ–1, ಗಳಿಗೆ ನೀಡಿದ ಜಾತಿ ಪ್ರಮಾಣಪತ್ರಗಳು ಅವುಗಳನ್ನು ರದ್ದು ಪಡಿಸುವವರೆಗೆ ಅಥವಾ ಅರ್ಜಿದಾರನು ತನ್ನ ಧಾರ್ಮಿಕ ನಿಷ್ಠೆ ಬದಲಾಯಿಸುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಜಾರಿಯಲ್ಲಿರುತ್ತದೆ.

ಹಿಂದುಳಿದ ವರ್ಗಗಳಿಗೆ ನಿಡುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳು 5 ವರ್ಷಗಳವರೆಗೆ ಅಥವಾ ಅವುಗಳನ್ನು ರದ್ದುಪಡಿಸುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಸಿಂಧುತ್ವದಲ್ಲಿರುತ್ತದೆ.

ಈ) ಬಂದಿಲ್ಲ

ಉ) ಉದ್ಭವಿಸುವುದಿಲ್ಲ

ಊ) ಸದ್ಯಕ್ಕೆ ಇರುವ ನಿಯಮಗಳಲ್ಲಿ ಗೊಂದಲವಿಲ್ಲದಿರುವುದರಿಂದ ಈಗಿರುವ ನಿಯಮಗಳನ್ನೇ ಮುಂದುವರಿಸಿಕೊಂಡು ಬದಲಾಗುತ್ತಿದೆ.

ನಮೂನೆ–ಎ

(ನಿಯಮ 3ಎ (1)ನ್ನು ನೋಡಿ)

ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಗಳ ಸಂಬಂಧದಲ್ಲಿ ಜಾತಿ ಪ್ರಮಾಣ ಪತ್ರಕ್ಕಾಗಿ ಅರ್ಜಿ

1. ಅರ್ಜಿದಾರನ ಹೆಸರು

2. ತಂದೆ / ತಾಯಿ / ಪೋಷಕರ (ತಂದೆ ತಾಯಿಗಳು ಜೀವಂತವಿರದಿದ್ದರೆ) ಹೆಸರು:
ಪೋಷಕರ ಸಂದರ್ಭದಲ್ಲಿ ಅರ್ಜಿದಾರನೋಡನೆ ಅವರ ಸಂಬಂಧ.

3. (ಎ) ಅರ್ಜಿದಾರನ ಹುಟ್ಟಿದ ದಿನಾಂಕ
(ಬಿ) ತಂದೆ / ತಾಯಿಯವರು ಹುಟ್ಟಿದ ಸ್ಥಳ
4. ಖಾಯಂ ವಿಳಾಸ
5. ಅಂಚೆ ವಿಳಾಸ
6. ಅರ್ಜಿದಾರನ / ತಂದೆತಾಯಿಯವರ
ಅಥವಾ ಪೋಷಕರ ಸಮುದಾಯ /
ಜಾತಿ / ಬುಡಕಟ್ಟು

ಪ್ರಮಾಣದ ಮೇಲೆ ಘೋಷಣೆ

---------- ಎಂಬಲ್ಲಿ ವಾಸವಾಗಿರುವ (ಪೂರ್ಣ ವಿಳಾಸ) ---------- ಎಂಬುವರ ಮಗ / ಮಗಳಾದ---------- ಎಂಬ ನಾನು ಈ ಮೂಲಕ ಶ್ರದ್ಧಾಪೂರ್ವಕವಾಗಿ ದೃಢೀಕರಿಸುತ್ತೇನೆ ಮತ್ತು ಪ್ರಮಾಣದ ಮೇಲೆ ಈ ಮುಂದಿನಂತೆ ಹೇಳಿಕೆ ನೀಡುತ್ತೇನೆ, ಎಂದರೆ:

ಅಭ್ಯರ್ಥಿಯಾದ ಶ್ರೀ / ಶ್ರೀಮತಿ---------- ಇವರು ನನ್ನ ಮಗ / ಮಗಳು / ಅವಲಂಬಿತ / ಪ್ರತಿಪಾಲಿತ ಆಗಿರುವರು. ನಾನು ಮತ್ತು ಅಭ್ಯರ್ಥಿಯು, ಅನುಸೂಚಿತ ಜಾತಿ / ಬುಡಕಟ್ಟು ಎಂದು ಮಾನ್ಯತೆ ಪಡೆದ ಜಾತಿ / ಬುಡಕಟ್ಟಿಗೆ ಸೇರಿರುತ್ತೇವೆ.

ಈ ಘೋಷಣೆಯು ನಾನು ತಿಳಿದಿರುವಷ್ಟರಮಟ್ಟಿಗೆ ಸತ್ಯವಾಗಿದೆ, ಆದಾಗ್ಯೂ, ಅದು ಸತ್ಯವಲ್ಲವೆಂದು ರುಜುವಾತಾದರೆ, ಭಾರತೀಯ ದಂಡ ಸಂಹಿತೆಯ ಪ್ರಕರಣ 171* ಮತ್ತು 181* ರ ಅಡಿಯಲ್ಲಿ ನಾನು ಸ್ವತ: ಕ್ರಿಮಿನಲ್ ಕಾನೂನು ವ್ಯವಹಾರಗಳಿಗೆ ಗುರಿಯಾಗಲು ಮತ್ತು ಈ ಪ್ರಮಾಣ ಪತ್ರಕ್ಕನುಸಾರವಾಗಿ ನನ್ನ ಮಗ / ಮಗಳು / ಅವಲಂಬಿತ / ಪ್ರತಿಪಾಲಿತ ಇವರಿಗೆ ನೀಡದ ಪ್ರಯೋಜನ ಅಥವಾ ರಿಯಾಯಿತಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಬದ್ದನಾಗಿರುತ್ತೇನೆ.

ಅಭ್ಯರ್ಥಿಯ ಸಹಿ

ಸ್ಥಳ:

ದಿನಾಂಕ:

ತಂದೆತಾಯಿ / ಪೋಷಕರ
(ತಂದೆ ತಾಯಿಗಳು ಜೀವಂತವಿರದಿದ್ದರೆ)
ಸಹಿ

ಸ್ಥಳ:

ದಿನಾಂಕ:

*ಯಾವುದೇ ಸರ್ಕಾರಿ ನೌಕರನಿಗೆ ಸತ್ಯವಲ್ಲದ ಮಾಹಿತಿ ನೀಡಿದ್ದಕ್ಕಾಗಿ ಭಾರತ ದಂಡ ಸಂಹಿತೆ ಪ್ರಕರಣ 171ರ ಅಡಿಯಲ್ಲಿ ಆರು ತಿಂಗಳುಗಳ ಅವಧಿಗೆ ವಿಸ್ತರಿಸಬಹುದಾದ ಸಾಮಾನ್ಯ ಕಾರಾಗೃಹವಾಸಕ್ಕೆ ಅಥವಾ 1,000/– ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆ ಅಥವಾ ಅವೆರಡಕ್ಕೂ ಗುರಿಯಾಗುತ್ತಾನೆ.

*ಸಾರ್ವಜನಿಕ ನೌಕರನಿಗೆ ಪ್ರಮಾಣ ವಚನ ಭೋದಿಸಲು ಅಥವಾ ದೃಢೀಕರಿಸಲು ಪ್ರಾಧಿಕೃತರಾದ ವ್ಯಕ್ತಿಗಳಿಗೆ ಪ್ರಮಾಣದ ಅಥವಾ ದೃಢೀಕರಣದ ಮೇಲೆ ನೀಡಿದ ಸುಳ್ಳು ಹೇಳಿಕೆ ನೀಡುವುದು ಭಾರತ ದಂಡ ಸಂಹಿತೆಯ ಪ್ರಕರಣ 181ರ ಅಡಿಯಲ್ಲಿ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾಗೃಹವಾಸ ಶಿಕ್ಷೆಗೆ ಮತ್ತು ಜುಲ್ಮಾನೆ ವಿಧಿಸುವುದಕ್ಕೆ ಗುರಿಪಡಿಸುತ್ತದೆ.

ಸೂಚನೆ: ಅಭ್ಯರ್ಥಿಗಳು ತಮ್ಮ ಅರ್ಜಿಗಳೊಡನೆ ಘೋಷಣೆಗಳನ್ನು ಮಾತ್ರ ಸಲ್ಲಿಸಬೇಕು ಸಿಂಧುತ್ವ ಪ್ರಮಾಣ ಪತ್ರವನ್ನು ಸಂಸ್ಥೆಯ ಮುಖ್ಯಸ್ಥರಿಂದ / ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆಯತಕ್ಕದ್ದು.

ನಮೂನೆ – ಬಿ

(ನಿಯಮ 3ಎ (1)ನ್ನು ನೋಡಿ)

ಹಿಂದುಳಿದ ವರ್ಗಗಳ ಪ್ರವರ್ಗ–Iರ ಸಂಬಂಧದಲ್ಲಿ.....ಜಾತಿ ಪ್ರಮಾಣ ಪತ್ರಕ್ಕಾಗಿ ಅರ್ಜಿ

ಇವರಿಗೆ:

ತಹಶೀಲ್ದಾರರು

---------- ತಾಲ್ಲೂಕು

---------- ಜಿಲ್ಲೆ.

ಮಾನ್ಯರೆ,

ಶ್ರೀ / ಶ್ರೀಮತಿ ---------- ಇವರ ಮಗ / ಮಗಳು / ಪತ್ನಿ / ಪತಿ ---------- ಎಂಬ ನಾನು, ಮೀಸಲಾತಿಯನ್ನು ಕ್ಲೇಮು ಮಾಡುವುದಕ್ಕಾಗಿ ಜಾತಿ ಪ್ರಮಾಣದ ಪತ್ರದ ನೀಡಿಕೆಗಾಗಿ ಈ ಮುಂದಿನಂತೆ ಮಾಹಿತಿಯನ್ನು ಸಲ್ಲಿಸುತ್ತದ್ದೇನೆ.

1. ಅಭ್ಯರ್ಥಿಯ ಹೆಸರು ಮತ್ತು ಉದ್ಯೋಗ
2. ಅಭ್ಯರ್ಥಿಯ ಸ್ವಂತ ಸ್ಥಳ ಗ್ರಾಮ:
   ತಾಲ್ಲೂಕು:
   ಜಿಲ್ಲೆ:
3. ಹುಟ್ಟಿದ ದಿನಾಂಕ
   ವಯಸ್ಸು ಮತ್ತು ಹುಟ್ಟಿದ ಸ್ಥಳ
4. ತಂದೆಯ / ತಾಯಿಯ / ಪೋಷಕರ
   ಪತಿಯ / ಪತ್ನಿಯ ಹೆಸರು
   ಮತ್ತು ಉದ್ಯೋಗ
5. ಅಭ್ಯರ್ಥಿಯ ಈಗಿನ ವಿಳಾಸ
6. ಅಭ್ಯರ್ಥಿಯ ಕಾಯಂ ವಿಳಾಸ
7. ಅಭ್ಯರ್ಥಿಯ ಜಾತಿ / ಉಪ ಜಾತಿ
   ಮತ್ತು ಪ್ರವರ್ಗ (ದಾಖಲೆಗಳನ್ನು ಒದಗಿಸಬೇಕು)
8. ಅಭ್ಯರ್ಥಿಯು ವಿದ್ಯಾಬ್ಯಾಸ ಮಾಡಿದ ವರ್ಷ ಮತ್ತು ಶಾಲೆಯ ಹೆಸರು

   ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ ತರಗತಿ
   ಮತ್ತು ಸ್ಥಳ
   ಶಾಲೆಗಳ ವಿವರ

ಪ್ರಮಾಣ ಮಾಡಿ ನೀಡಿದ ಘೋಷಣೆ

ಮೇಲೆ ಒದಗಿಸಿದ ಮಾಹಿತಿ / ವಿವರಣೆಯು ನಾನು ತಿಳಿದಿರುವಷ್ಟರಮಟ್ಟಿಗೆ ಸತ್ಯವೆಂದು ಶ್ರದ್ಧಾಪೂರ್ವಕವಾಗಿ ದೃಢೀಕರಿಸುತ್ತೇನೆ ಮತ್ತು ಘೋಷಿಸುತ್ತೇನೆ.

ತಮ್ಮ ವಿಶ್ವಾಸಿ,

ಸ್ಥಳ:

ದಿನಾಂಕ: (ಅಭ್ಯರ್ಥಿಯ ಸಹಿ)

ಮೇಲೆ ಒದಗಿಸಿದ ವಿವರಣೆಗಳು ಸತ್ಯವಾಗಿವೆ ಮತ್ತು ಅವು ಸತ್ಯವಲ್ಲ ಎಂದು ಕಂಡುಬಂದಲ್ಲಿ, ನಾನು ಕ್ರಿಮಿನಲ್ ವಿಚಾರಣೆಗೆ ಬದ್ಧನಾಗಿರುತ್ತೇನೆ.

ತಂದೆ / ತಾಯಿ / ಪೋಷಕರ (ತಂದೆ / ತಾಯಿ ಜೀವಂತವಿಲ್ಲದಿದ್ದರೆ)

ಸ್ಥಳೀಯ ಇಬ್ಬರು ಸಾಕ್ಷಿದಾರರು:

1)

2)

ನಮೂನೆ–ಸಿ

(ನಿಯಮ 3ಎ(1)ನ್ನು ನೋಡಿ)

ಆದಾಯ ಮತ್ತು ಜಾತಿ ಪ್ರಮಾಣ ಪತ್ರಕ್ಕಾಗಿ ಅರ್ಜಿ

ಇವರಿಗೆ,

ತಹಶೀಲ್ದಾರರು

----------ತಾಲ್ಲೂಕು

----------ಜಿಲ್ಲೆ.

ಮಾನ್ಯರೆ,

ಶ್ರೀ / ಶ್ರೀಮತಿ---------- ಇವರ ಮಗ / ಮಗಳು / ಪತ್ನಿ / ಪತಿ----------ಎಂಬ ನಾನು, ಮೀಸಲಾತಿಯನ್ನು ಕ್ಲೇಮು ಮಾಡಲು ಆದಾಯ ಮತ್ತು ಜಾತಿ ಪ್ರಮಾಣ ಪತ್ರದ ನೀಡಿಕೆಗಾಗಿ ಈ ಮುಂದಿನ ಮಾಹಿತಿಯನ್ನು ಸಲ್ಲಿಸುತ್ತಿದ್ದೇನೆ.

1. ಅಭ್ಯರ್ಥಿಯ ಹೆಸರು ಮತ್ತು ಉದ್ಯೋಗ
2. ಅಭ್ಯರ್ಥಿಯ ಸ್ವಂತ ಸ್ಥಳ ಗ್ರಾಮ
ತಾಲ್ಲೂಕು
ಜಿಲ್ಲೆ
3. ಹುಟ್ಟಿದ ದಿನಾಂಕ
ವಯಸ್ಸು ಮತ್ತು ಹುಟ್ಟಿದ ಸ್ಥಳ
4. ತಂದೆ / ತಾಯಿ / ಪೋಷಕ / ಪತ್ನಿ /
ಪತಿಯ ಹೆಸರು ಮತ್ತು ಉದ್ಯೋಗ
(ಉದ್ಯೋಗವು ಸರ್ಕಾರಿ / ಅರೆ ಸರ್ಕಾರಿ /
ಸಾರ್ವಜನಿಕ ಉದ್ಯಮ / ಖಾಸಗಿ)
5. ಅಭ್ಯರ್ಥಿಯ ಈಗಿನ ವಿಳಾಸ
6. ಅಭ್ಯರ್ಥಿಯ ಖಾಯಂ ವಿಳಾಸ
7. ಅಭ್ಯರ್ಥಿಯ ಜಾತಿ / ಉಪ ಜಾತಿ ಮತ್ತು
ಪ್ರವರ್ಗ ದಾಖಲೆಗಳನ್ನು ಒದಗಿಸಬೇಕು)
8. ಅಭ್ಯರ್ಥಿಯ ವಿದ್ಯಾಬ್ಯಾಸ ವರ್ಷ ಮತ್ತು ಶಾಲೆಯ
ಹೆಸರು
ಮಾಡಿದ ಪ್ರಾಥಮಿಕ, ಮಾಧ್ಯಮಿಕ ತರಗತಿ ಮತ್ತು ಸ್ಥಳ
ಮತ್ತು ಪ್ರೌಢ ಶಾಲೆಗಳ ವಿವರ:
9. ಅಭ್ಯರ್ಥಿಯ, ಅಭ್ಯರ್ಥಿಯ ತಂದೆ /
ತಾಯಿ / ಪೋಷಕರ (ತಂದೆ / ತಾಯಿ
ಜೀವಂತವಿಲ್ಲದಿದ್ದರೆ) ವಾರ್ಷಿಕ ಆದಾಯ
(ಸರ್ಕಾರಿ / ಅರೆ ಸರ್ಕಾರಿ /
ಸಾರ್ವಜನಿಕ ಉದ್ಯಮ / ಖಾಸಗಿ ಸೇವೆಯಲ್ಲಿದ್ದರೆ)
(i) ವೇತನ ಶ್ರೇಣಿ

(ii) ಜಮೀನಿನ ವಿವರ

(iii) ಇತರ ಮೂಲಗಳು

10. ಮೇಲು ಸ್ಥರದ (ಕಿಮಿಲೇಯರ್)
ಸೂತ್ರಗಳನ್ನು ಅನ್ವಯಿಸಿದ ನಂತರ ಅಭ್ಯರ್ಥಿಯು /
ತಂದೆ / ತಾಯಿ / ಪತ್ನಿ ಪತಿಯು
ಇದಕ್ಕೆ ಅರ್ಹನಾಗಿದ್ದಾನೆಯೆ?

ಪ್ರಮಾಣ ಮಾಡಿ ಹೇಳಿದ ಘೋಷಣೆ

ಮೇಲೆ ಒದಗಿಸಿದ ಮಾಹಿತಿಯು ನಾನು ತಿಳಿದಿರುವಷ್ಟರ ಮಟ್ಟಿಗೆ ಸತ್ಯವೆಂದು ಶ್ರದ್ಧಾ ಪೂರ್ವಕ ಪ್ರಮಾಣ ಮಾಡುತ್ತೇನೆ ಮತ್ತು ಘೋಷಿಸುತ್ತೇನೆ.

ತಮ್ಮ ವಿಶ್ವಾಸಿ,

ಸ್ಥಳ

ದಿನಾಂಕ (ಅಭ್ಯರ್ಥಿಯ ಸಹಿ)

ಮೇಲೆ ಒದಗಿಸಿದ ವಿವರಗಳೂ ಸತ್ಯವಾಗಿವೆ ಮತ್ತು ಒಂದು ವೇಳೆ ಅವು ಸತ್ಯವಲ್ಲ ವೆಂದು ಕಂಡುಬಂದಲ್ಲಿ ನಾನು ಕ್ರಿಮಿನಲ್ ವಿಚಾರಣೆಗೆ ಬದ್ಧನಾಗಿರುತ್ತೇನೆ.

ತಂದೆ / ತಾಯಿ / ಪೋಷಕರ (ತಂದೆ / ತಾಯಿ ಜೀವಂತವಿಲ್ಲದಿದ್ದರೆ) ಸಹಿ

ಸ್ಥಳೀಯ ಇಬ್ಬರು ಸಾಕ್ಷಿದಾರರು

ನಾವು ಅಭ್ಯರ್ಥಿಯನ್ನು / ತಂದೆ / ತಾಯಿ / ಪತ್ನಿ / ಪತಿಯನ್ನು ಮತ್ತು ಅವರ ಸಹಿಗಳನ್ನು ಗುರುತಿಸುತ್ತೇವೆ.

ಸಾಕ್ಷಿದಾರರ ಸಹಿ: 1.

(ಪೂರ್ಣ ವಿಳಾಸದೊಂದಿಗೆ) 2.

ಸ್ಥಳ: